ಶರಧಿಯಕ್ಕ ಪದೇ ಪದೇ ಒತ್ತಾಯಿಸತೊಡಗಿದರು. ಅಮ್ಮ ನನ್ನ ಬದಲಾದ ಬದುಕನ್ನು ನೋಡಿ ಅತೀವ ಸಂತೋಷಗೊಂಡಿದ್ದಳು. ಸುಬ್ಬಣ್ಣ, ಸುನಿಲ್ ಸಾರ್ ಮತ್ತು ಶರಧಿಯಕ್ಕನನ್ನು ಮನಸಾರೆ ಕೊಂಡಾಡುತ್ತಿದ್ದಳು. ದೇವರು ಒಳ್ಳೆಯವರನ್ನು ಎಂದೂ ಕೈಬಿಡುವುದಿಲ್ಲ.. ಎಂದು ಪ್ರತಿದಿನ ಬೆಳಿಗ್ಗೆ ದೇವರ ದೀಪ ಹಚ್ಚಿ ಪೂಜಿಸತೊಡಗಿದ್ದಳು. ನಾನೂ ಕೂಡ ವಾಸ್ತವವನ್ನು ಅರಿತು ನನ್ನ ಭಗ್ನಪ್ರೇಮದಿಂದ ಮುಕ್ತನಾಗಿ ಹೇಮಾಳನ್ನು ಸಂಪೂರ್ಣವಾಗಿ ಮರೆತು ಕಾರ್ಖಾನೆಯ ಕೆಲಸದಲ್ಲಿ ತೊಡಗಿಸಿಕೊಂಡುಬಿಟ್ಟಿದ್ದೆ. ಅವಳು ಈಗ ನಮ್ಮೂರಿನ ಒಬ್ಬ ಚಂದದ ಹೆಣ್ಣುಮಗಳಾಗಿ, ಒಬ್ಬ ಪುರುಷನ ಹೆಂಡತಿಯಾಗಿ, ಒಂದು ಮಗುವಿನ ತಾಯಾಗಿ ಕಾಣಿಸತೊಡಗಿದಳು. ನನ್ನ ಏಕಮುಖ ಪ್ರೀತಿಯನ್ನು ನೆನಪಿಸಿಕೊಂಡರೆ ನನಗೇ ನಗು ಬರುವಷ್ಟು ನಾನು ಬದಲಾಗಿಹೋದೆ. ಈ ನಡುವೆ ಶರಧಿಯಕ್ಕ ಒಂದು ಮುದ್ದಾದ ಹೆಣ್ಣುಮಗುವಿನ ತಾಯಿಯಾದರು. ಅಮ್ಮನನ್ನು ಕರೆದುಕೊಂಡು ಅವರ ಮನೆಗೆ ಹೋಗಿ ಮಗುವನ್ನು ನೋಡಿಕೊಂಡು ಇನ್ನಿಲ್ಲದ ಸಂತಸವನ್ನು ಮನದಲ್ಲಿ ತುಂಬಿಕೊಂಡು ಬಂದೆ. ಸುನಿಲ್ ಸಾರ್ ಮತ್ತು ಶರಧಿಯಕ್ಕನ ಅನ್ಯೋನ್ಯ ದಾಂಪತ್ಯವನ್ನು ಕಣ್ಣಾರೆ ಕಂಡು ನನ್ನ ಮನದಲ್ಲಿಯೂ ಮದುವೆಯಾಗಬೇಕೆಂಬ ಆಸೆ ಚಿಗುರೊಡೆಯತೊಡಗಿತ್ತು. ತನ್ನೆಲ್ಲಾ ಸುಖ ಸಂತೋಷಗಳನ್ನು ತ್ಯಾಗ ಮಾಡಿ ನನ್ನನ್ನು ಸಾಕಿ ಸಲಹಿದ ನನ್ನ ಅಮ್ಮನನ್ನು ಇನ್ನು  ಮುಂದೆ ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ಅವಳಿಗೆ ಜೀವನದಲ್ಲಿ ನೆಮ್ಮದಿ ಮತ್ತು ತನ್ನ ಬದುಕು ಸಾರ್ಥಕವಾಯಿತು ಎಂಬ ಭಾವವನ್ನು ತುಂಬ ಬೇಕೆಂಬ ಹಂಬಲವೂ ಹೆಚ್ಚಾಯಿತು.

ಮದುವೆಯಾಗಬೇಕೆನ್ನುವ ನಿರ್ಧಾರ ನನ್ನ ಮನದಲ್ಲಿ ಗಟ್ಟಿಯಾಗುತ್ತಿದ್ದಂತೆ ನನ್ನ ಎದೆಯ ಮೇಲಿದ್ದ ಹೇಮಾಳ ಹೆಸರಿನ ಹಚ್ಚೆಯನ್ನು ಅತ್ಯಂತ ತುರ್ತಾಗಿ ತೆಗಸಬೇಕೆಂದು ಅನಿಸತೊಡಗಿತು.(ನಾನು ಅಮ್ಮ ನೋಡಿಬಿಟ್ಟಾಳು ಎಂದು ಯಾವಾಗಲೂ ತುಂಬು ತೋಳಿನ ಬಣ್ಣದ ಬನಿಯನ್ನುಗಳನ್ನೇ ಧರಿಸುತ್ತಿದ್ದೆ.) ಈಗ ಆ ಹೆಸರು ಬರೀ ಅಕ್ಷರಗಳಾಗಿ ಗೋಚರಿಸತೊಡಗಿದ್ದವು. ಯಾವ ಭಾವನೆಗಳೂ ಉಳಿದಿರಲಿಲ್ಲ. ಹಿಂದುಮುಂದೂ ಯೋಚಿಸದೆ ಹುಚ್ಚು ಪ್ರೀತಿಯ ಭ್ರಮೆಗೆ ಬಿದ್ದು ನಾನೇ ಮಾಡಿಕೊಂಡ ತಪ್ಪು  ಕೆಲಸ ಎಂದು ಪಶ್ಚಾತ್ತಾಪವಾಗತೊಡಗಿತು. ತಕ್ಷಣವೇ ನಾನು ಕಾರ್ಯೋನ್ಮುಖನಾದೆ. ರೆಸಿಡೆನ್ಸಿ ರಸ್ತೆಯಲ್ಲಿದ್ದ ಒಂದು ಕಾಸ್ಮೆಟಿಕ್ ಕ್ಲಿನಿಕ್ಕಿನ ವೈದ್ಯರನ್ನು ಭೇಟಿಯಾಗಿ ಎದೆಯ ಮೇಲಿನ ಹಚ್ಚೆಯನ್ನು ತೋರಿಸಿ ಅವರ ಸಲಹೆ ಪಡೆದೆ. ಅವರು ಅದನ್ನು ಸೂಕ್ಷ್ಮವಾಗಿ ಗಮನಿಸಿ ಇಂಕಿನ ಗುಣಮಟ್ಟ ಅಷ್ಟೇನೂ ಒಳ್ಳೆಯದಿಲ್ಲವಾದ್ದರಿಂದ ಮತ್ತು ಕೇವಲ ಕಪ್ಪು ಬಣ್ಣದ ಎರಡೇ ಅಕ್ಷರಗಳಾದ್ದರಿಂದ ಲೇಸರ್ ಚಿಕಿತ್ಸೆಯಿಂದ ಕಲೆ ಉಳಿಯದಂತೆ ಸುಲಭವಾಗಿ ತೆಗೆಯಬಹುದು ಎಂದು ಭರವಸೆ ನೀಡಿದಾಗ ನನಗೆ ಸಮಾಧಾನವಾಯಿತು. ಎರಡು ಮೂರು ಸಿಟ್ಟಿಂಗುಗಳಲ್ಲಿ ಸಂಪೂರ್ಣವಾಗಿ ಹಚ್ಚೆಯನ್ನು ತೆಗೆಯಬಹುದೆಂದು ಹೇಳಿ ಅದಕ್ಕೆ ತಗಲುವ ವೆಚ್ಚದ ಬಗ್ಗೆಯೂ ತಿಳಿಸಿದರು. ಅಷ್ಟೇ ಅಲ್ಲದೆ ದಿನವೂ ಇಂತಹ ಮೂರರಿಂದ ನಾಲ್ಕು ಜನ ಪೇಷಂಟುಗಳಿಗೆ ಚಿಕಿತ್ಸೆ ನೀಡುತ್ತೇನೆ, ಭಗ್ನಪ್ರೇಮದಿಂದಲೋ, ಪ್ರೀತಿಸಿದ ಮೇಲೆ ಒಬ್ಬರ ವರ್ತನೆ ಮತ್ತೊಬ್ಬರಿಗೆ ಹಿಡಿಸದೇ ಮುರಿದ ಸಂಬಂಧಗಳಿಂದಲೋ ಇಂತಹ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ ಎಂದು ಹೇಳಿ ನನ್ನ ಬಗ್ಗೆ ಕೇಳಿದರು. ನಾನು ಸಂಕ್ಷಿಪ್ತವಾಗಿ ನಿಜವನ್ನೇ ತಿಳಿಸಿದೆ. ಅದಾದ ಮೇಲೆ ಅವರ ಕ್ಲಿನಿಕ್ಕಿಗೆ ಮೂರು ಬಾರಿ ಭೇಟಿಯಿತ್ತು ಲೇಸರ್ ಚಿಕಿತ್ಸೆಯಿಂದ ನನ್ನ ಎದೆಯ ಮೇಲಿನ ಹಚ್ಚೆಯನ್ನು ತೆಗೆಸಿಕೊಂಡೆ. ನನ್ನ ಎದೆಯನ್ನು ನಾನು ಆಗಾಗ ನೋಡಿಕೊಂಡು ಅಲ್ಲಿ ಏನೊಂದೂ ಕಲೆಯೂ ಕಾಣಿಸದೆ ನೆಮ್ಮದಿಯ ನಿಟ್ಟುಸಿರುಬಿಡತೊಡಗಿದೆ.

ಮದುವೆಯಾಗಿ ನನ್ನ ಅಮ್ಮನನ್ನು ಸುಖವಾಗಿರುವಂತೆ ನೋಡಿಕೊಳ್ಳಬೇಕೆನ್ನುವ ನನ್ನ ಆಶಯ ಈಡೇರುವ ಸಮಯವೂ ಅದೊಂದು ದಿನ ಒದಗಿಬಂದಿತು.

ಸುಬ್ಬಣ್ಣನ ಮಗಳಿಗೆ ಒಂದು ವರ್ಷ ತುಂಬಿತ್ತು. (ಮೊದಲನೆಯವನು ಮಗ) ಹೈದರಾಬಾದಿನಲ್ಲಿಯೇ ಮಗಳ ನಾಮಕರಣ ಸಮಾರಂಭವನ್ನು ಮಾಡುವ ಸಲುವಾಗಿ ಕೆಲವೇ ಕೆಲವು ಹತ್ತಿರದ ನೆಂಟರು ಮತ್ತು ಸ್ನೇಹಿತರನ್ನು ಆಹ್ವಾನಿಸಿದ್ದ. ನನಗೂ ಅಮ್ಮನಿಗೂ ಪ್ರತ್ಯೇಕವಾಗಿ ಫೋನು ಮಾಡಿ ಬಂದೇ ಬರಬೇಕೆಂದು ಅಲವತ್ತುಕೊಂಡಿದ್ದ. ಬೇರೆ ಯಾರಾದರೂ ಆಗಿದ್ದರೆ ಅಮ್ಮ, ಮನೆ ಅಂಗಡಿ ಎಲ್ಲವನ್ನೂ ಬಿಟ್ಟು ಬರಲು ಆಗುವುದಿಲ್ಲ, ನೀನೊಬ್ಬನೇ ಹೋಗಿ ಬಾ ಎನ್ನುತ್ತಿದ್ದಳೇನೋ. ಸುಬ್ಬಣ್ಣನ ಬಗ್ಗೆ ಅವಳಿಗೆ ಮೊದಲಿನಿಂದಲೂ ಇನ್ನಿಲ್ಲದ ಮಮತೆ. ಅದೂ ಅಲ್ಲದೆ ನನ್ನ ಜೀವನ ಬದಲಾಗಲು ಅವನೂ ಒಬ್ಬ ಕಾರಣಕರ್ತ ಎನ್ನುವ ಕೃತಜ್ಞತೆಯೂ ಅವಳಲ್ಲಿತ್ತು ಮತ್ತು ತವರಿನ ಕಡೆಯ ಎಲ್ಲಾ ಬಂಧುಗಳೂ ಬರುತ್ತಾರೆ ಎನ್ನುವ ಸಂತಸವೂ ಕಾರಣವಾಗಿತ್ತು. ಅದರಿಂದಾಗಿ ಮನೆ ಅಂಗಡಿ ಎಲ್ಲವನ್ನೂ ನೋಡಿಕೊಳ್ಳಲು ವ್ಯವಸ್ಥೆ ಮಾಡಿ ನನ್ನೊಂದಿಗೆ ಹೈದರಾಬಾದಿಗೆ ಹೊರಟಿದ್ದಳು.

ನಾಮಕರಣದ ಸರಳ ಸಮಾರಂಭ ಹೈದರಾಬಾದಿನ ಪ್ರತಿಷ್ಠಿತ ಬಡಾವಣೆಯಲ್ಲಿದ್ದ ಒಂದು ಕನವೆನ್ಷನ್ ಹಾಲಿನಲ್ಲಿ ಯಶಸ್ವಿಯಾಗಿ ನೆರವೇರಿತು. ಬಂದಿದ್ದ ಎಲ್ಲಾ ನೆಂಟರು ಮತ್ತು ಸ್ನೇಹಿತರು ಸಮಾರಂಭದ ನಂತರ ಊಟ ಮಾಡಿ ತೆರಳಿದರು. ಸುನಿಲ್ ಸಾರ್, ಶರಧಿಯಕ್ಕ ಬಾಣಂತಿಯಾದ್ದರಿಂದ ಒಬ್ಬರೇ ಬಂದಿದ್ದರು. ಅಮ್ಮನನ್ನು ಸೌಜನ್ಯಯುತವಾಗಿ ಮಾತನಾಡಿಸಿದರು. ಸಮಾರಂಭದ ನಂತರ ಕೆಲವು ಗಂಟೆಗಳನ್ನು ನಮ್ಮೊಂದಿಗೆ ಕಳೆದು ಅವರೂ ಹೊರಟರು. ಅಮ್ಮ ಆ ದಿನ ರಾತ್ರಿಯ ಬಸ್ಸಿಗೆ ಬೆಂಗಳೂರಿಗೆ ಹೊರಟು ಬಿಡುವ ಯೋಜನೆ ಹಾಕಿಕೊಂಡಿದ್ದಳು. ಆದರೆ ಸುಬ್ಬಣ್ಣ ಬಿಡಲಿಲ್ಲ. ಅಯ್ಯೋ ಚಿಕ್ಕೀ.. ದಿನಾ ನಿಮ್ಮೂರಲ್ಲಿ ಇರೋದು ಇದ್ದೇ ಇದೆ.. ಯಾವ ದೇವ್ರು ಕಣ್ಣುಬಿಟ್ಟನೋ ಈಗ ಫಸ್ಟ ಟೈಮ್ ಇಲ್ಲಿಗೆ ಬಂದಿದೀಯಾ..ಎರಡು ದಿನ ಇದ್ದು ಹೈದರಾಬಾದು ನೋಡಿಕೊಂಡು ಹೋಗು.. ಮನೆ ಏನೂ ಎಲ್ಲೂ ಓಡೋಗೋದಿಲ್ಲ ಎಂದು ಒತ್ತಾಯಿಸಿದ. ಬೆಂಗಳೂರಿನ ಅಜ್ಜಿ, ತಾತ ಮತ್ತು ದೊಡ್ಡಮ್ಮ (ಸುಬ್ಬಣ್ಣನ ತಾಯಿ) ಮತ್ತು ಅತ್ತಿಗೆ ಎಲ್ಲರೂ ಸುಬ್ಬಣ್ಣನ ಅಭಿಪ್ರಾಯವನ್ನು ಅನುಮೋದಿಸಿದರು. ಅಮ್ಮ ಮುಂದೆ ಮಾತನಾಡದೆ ಸುಮ್ಮನಾದಳು.

## ಇಲ್ಲಿಯವರೆಗೆ



ದೂರದ ಸಂಬಂಧಿ ಹೇಮಾಳನ್ನು ಗಿರಿಧರ ಬಹಳ ಪ್ರೀತಿಸುತ್ತಾನೆ. ಒಂದೇ ಕಾಲೇಜಿಗೆ ಇಬ್ಬರೂ ಹೋಗುತ್ತಿದ್ದರಿಂದ ಕಾಲೇಜಿನಲ್ಲೂ ಆಕೆಯನ್ನು ದಿನಾ ನೋಡಿ ಮದುವೆಯಾಗುವುದಾದರೆ ಹೇಮಾಳನ್ನೇ ಎಂಬ ನಿರ್ಧಾರಕ್ಕೆ ಬರುತ್ತಾನೆ. ಇದನ್ನು ತನ್ನ ತಾಯಿ ಬಳಿ ಹೇಳಿಕೊಳ್ಳುವುದಿಲ್ಲ. ಮೈಸೂರಿನಲ್ಲಿ ಹಚ್ಚೆ ಹಾಕುವ ಹೆಂಗಸಿನ ಬಳಿ ಹೋಗಿ ಎದೆಯ ಮೇಲೆ ಸಣ್ಣ ಅಕ್ಷರಗಳಲ್ಲಿ 'ಹೇಮಾ' ಎಂದು ಹಚ್ಚೆ ಹಾಕಿಸಿಕೊಳ್ಳುತ್ತಾನೆ. ಒಂದು ದಿನ ಹೇಮಾಳ ಮದುವೆಯ ಆಮಂತ್ರಣ ಪತ್ರಿಕೆ ನೋಡಿ ಗಿರಿಧರನ ಕನಸು ಭಗ್ನವಾಗುತ್ತದೆ.

ದಿಕ್ಕೇ ತೋಚದಂತಾದ ಗಿರಿಧರ ಆಗ ತನ್ನ ತಾಯಿ ಬಳಿ ತಾನು ಹೇಮಾಳನ್ನೇ ಮದುವೆಯಾಗಬೇಕು ಅಂದುಕೊಂಡಿದ್ದೆ. ಆದರೆ ಈಗ ಕಥೆ ಬೇರೆಯೇ ಆಯಿತು ಎಂದು ನಿವೇದಿಸಿಕೊಳ್ಳುತ್ತಾನೆ. ಅವಳಿಗಿಂತ ಸುಂದರವಾದ ಹೆಣ್ಣು ತಂದು ಮದುವೆ ಮಾಡುವುದಾಗಿ ತಾಯಿ ಭರವಸೆ ಕೊಡುತ್ತಾಳೆ. ಅಲ್ಲಿಗೆ ಗಿರಿಧರನ ಪ್ರೇಮಪರ್ವ ಮುಗಿದೇ ಹೋಗುತ್ತದೆ.